ಓ.ಎಸ್. ನಂಃ 342/2018

**ಡಿ.ಡಬ್ಲ್ಯೂಃ 1**

**ದಿನಾಂಕ 24.09.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಜಿ.ಜಿ. ವಕೀಲರಿಂದಃ**

1. ದಾವಾ ಆಸ್ತಿಯನ್ನು ಖರೀದಿಸಿರುವ ದಿನಾಂಕ ನನಗೆ ನೆನಪಿಲ್ಲ ಆದರೆ ದಾವಾ ಆಸ್ತಿಯನ್ನು ಖರೀದಿಸಿ ಈಗ 8 ವರ್ಷಗಳಾಗಿರಬಹುದು. ಸರ್ವೇ ನಂಬರ್ 176/4 ರಲ್ಲಿ ನಾನು 10 ಗುಂಟೆ ಜಮೀನನ್ನು 2 ರಿಂದ 4 ನೇ ಪ್ರತಿವಾದಿಯರಿಂದ ಖರೀದಿಸಿರುತ್ತೇನೆ. ದಿನಾಂಕ 11.04.2016 ರಂದು ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆ ಎಂದರೆ ಸರಿ.

2. ದಿನಾಂಕ 21.10.2017 ರಂದು ವಾದಿಯು ಸಹ ಸರ್ವೇ ನಂಬರ್ 176/5 ರಲ್ಲಿ 10 ಗುಂಟೆ ಜಮೀನನ್ನು ಸುಶೀಲ ಮತ್ತು ಅವರ ಮಕ್ಕಳಿಂದ ಖರೀದಿಸಿರುತ್ತಾರೆ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಖರೀದಿಸಿದ ನಂತರದಲ್ಲಿ ವಾದಿಯು ಸರ್ವೇ ನಂಬರ್ 176/5 ರ 10 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯು ಮೊದಲು ಇದ್ದು, ಅದರ ನಂತರದಲ್ಲಿ ವಾದಿಯರು ಖರೀದಸಿದ ಸರ್ವೇ ನಂಬರ್ 176/5 ರ 10 ಗುಂಟೆ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ವಾದಿಯರ ಸದರಿ ಜಮೀನು ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದು ನುಡಿದಿರುತ್ತಾರೆ.

3. ಸರ್ವೇ ನಂಬರ್ 1156/1 ಬಿ ಇದು ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೇ ನಂಬರ್ 1156 ರ ಜಮೀನು ಪೂರ್ವ ದಿಕ್ಕಿಗೆ ಇದೆ ಎಂದು ಸ್ವತಃ ನುಡಿದಿರುತ್ತಾರೆ. ಸಾಕ್ಷಿಗೆ ಈಗ ಮಿರ್ಲೆ ಗ್ರಾಮದ ಗ್ರಾಮ ನಕಾಶೆಯನ್ನು ತೋರಿಸಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಪಿ.9 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಪಿ.9 ರಲ್ಲಿ ಹಸಿರು ಬಣ್ಣದಿಂದ ಗುರುತಿಸಲಾದ ಭಾಗವನ್ನು ತೋರಿಸಿ ಅದು ರಾಮ ಸಮುದ್ರ ನಾಲಾ ಏರಿ ಎಂದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನೋಡಿ ಹೌದು ಎಂದು ಉತ್ತರಿಸಿದ್ದು, ಸದರಿ ಭಾಗವನ್ನು ನಿಪಿ.9(ಎ) ಎಂದು

ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಪಿ.9(ಎ) ನಾಲಾ ಏರಿಯನ್ನು ತೋರಿಸಿ ಸದರಿ ಏರಿಯ ಕೆಳಭಾಗದಲ್ಲಿರುವ ಬಂಡಿ ದಾರಿಯಿಂದಲೇ ವಾದಿಯರ ಸರ್ವೇ ನಂಬರ್ 176/5 ರ 10 ಗುಂಟೆ ಜಮೀನಿಗೆ ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೇ ನಂಬರ್ 176/5 ರ ಜಮೀನಿಗೆ ಯಾವುದೇ ದಾರಿ ಇಲ್ಲ ಎಂದು ನುಡಿದಿರುತ್ತಾರೆ.

4. ನಿಪಿ.9(ಎ) ನಾಲಾ ಏರಿಯಿಂದ ವಾದಿಯರ ಸರ್ವೇ ನಂಬರ್ 176/5 ರ 10 ಗುಂಟೆ ಜಮೀನಿಗೆ ಹೋಗಲು ಬಂಡಿ ದಾರಿ ಇದೆ ಎಂದರೆ ಸರಿಯಲ್ಲ. ನಾನು 2 ರಿಂದ 4 ನೇ ಪ್ರತಿವಾದಿರೊಂದಿಗೆ ಶಾಮಿಲಾಗಿ ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿರುವ ವಾದಿಯರ ಜಮೀನಿಗೆ ಹೋಗುವ ಬಂಡಿ ದಾರಿಯನ್ನು ಸೇರಿಸಿಕೊಂಡು ನಿಪಿ.2 ರ ಸುಳ್ಳು ಕ್ರಯ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಕ್ರಯದಾರರಾದ ನನ್ನ ಜಮೀನು ಎಂದು ಸುಳ್ಳು ಚೆಕ್ಕುಬಂಧಿಯನ್ನು ನಿಪಿ.2 ರಲ್ಲಿ ತೋರಿಸಿರುತ್ತೇವೆ ಎಂದರೆ ಸರಿಯಲ್ಲ.

5. ವಾದಿಯರಿಗೆ ಸರ್ವೇ ನಂಬರ್ 1156/1 ಎ ರಲ್ಲಿ 1 ಎಕರೆ 10 ಗುಂಟೆ ಜಮೀನು ಇದೆ ಎಂದರೆ ಸರಿ. ಕೃಷ್ಣೇಗೌಡ ಬಿನ್ ರಾಮೇಗೌಡ ನನ್ನ ಅಣ್ಣ. ವಾದಿಯರ ಸರ್ವೇ ನಂಬರ್ 1156/1 ಎ ರ 1 ಎಕರೆ 10 ಗುಂಟೆ ಜಮೀನಿನ ಸಂಬಂಧ ಈ ದಾವೆಯ 2 ನೇ ವಾದಿಯು ನನ್ನ ಅಣ್ಣನಾದ ಕೃಷ್ಣೇಗೌಡರ ವಿರುದ್ಧ ಅಸಲು ದಾವೆ ಸಂಖ್ಯೆ 160/2017 ರ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಅಸಲು ದಾವೆ ಸಂಖ್ಯೆ 160/2017 ರ ದಾವೆಯಲ್ಲಿ 2 ನೇ ವಾದಿ ಮತ್ತು ನನ್ನ ಅಣ್ಣನಾದ ಕೃಷ್ಣೇಗೌಡರು ರಾಜಿ ಮಾಡಿಕೊಂಡು ಅದರ ಪ್ರಕಾರ ವಾದಿಯರಿಗೆ ಸೇರಿದ ಸರ್ವೇ ನಂಬರ್ 1156/1 ಎ ರಲ್ಲಿ 3 ಗುಂಟೆ ಜಮೀನನ್ನು 2 ನೇ ವಾದಿ ನನ್ನ ಅಣ್ಣನಾದ ಕೃಷ್ಣೇಗೌಡರಿಗೆ ಬಿಟ್ಟು ಕೊಟ್ಟಿದ್ದು, ಅದರ ಬದಲಾಗಿ ನನ್ನ ಅಣ್ಣನಾದ ಕೃಷ್ಣೇಗೌಡರು ಸರ್ವೇ ನಂಬರ್ 176/2 ರಲ್ಲಿ 1 ½ ಗುಂಟೆ ಜಮೀನನ್ನು 2 ನೇ ವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಶಾಸಕರ ಮಾತಿನ ಪ್ರಕಾರ 2 ನೇ ವಾದಿ ತಮಗೆ ರಸ್ತೆ ಇಲ್ಲದಿರುವ ಕಾರಣ ನನ್ನ ಅಣ್ಣನಾದ ಕೃಷ್ಣೇಗೌಡರಿಂದ 1 ½ ಗುಂಟೆ ಜಮೀನಿಗೆ ತಮ್ಮ ಸರ್ವೇ ನಂಬರ್ 1156/1 ಎ ರಲ್ಲಿ 3 ಗುಂಟೆ ಜಮೀನನ್ನು ವರ್ಗಾ-ವರ್ಗಿ ಮಾಡಿಕೊಂಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

6. ನಿಪಿ.9(ಎ) ರ ಕಾಲುವೆ ಏರಿಯ ಕೆಳಭಾಗದಲ್ಲಿ ನನ್ನ ಅಣ್ಣನಾದ ಕೃಷ್ಣೇಗೌಡರ ಸರ್ವೇ ನಂಬರ್ 176/2 ರ ಜಮೀನು ಇದೆ ಎಂದರೆ ಸರಿ. ನಿಪಿ.9(ಎ) ರ ಕಾಲುವೆ ಏರಿಯ ಬಲಭಾಗದಲ್ಲಿ ಇರುವ ಹಸಿರು ಬಣ್ಣದಲ್ಲಿ ಗುರುತಿಸಿರುವ ಭಾಗವನ್ನು ತೋರಿಸಿ, ಸದರಿ ಭಾಗವು ಸರಕಾರಿ ಬಂಡಿ ದಾರಿ ಆಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ. ಸದರಿ ಭಾಗವನ್ನು ನಿಪಿ.9(ಬಿ) ಎಂದು ಗುರುತಿಸಲಾಯಿತು. ಸುಮಾರು 40-50 ವರ್ಷಗಳಿಂದಲೂ ನಿಪಿ.9(ಎ) ರ ಕಾಲುವೆ ಏರಿಯ ಬಲಭಾಗದಲ್ಲಿ ನಿಪಿ.9(ಬಿ) ಸರಕಾರಿ ಬಂಡಿ ದಾರಿ ಇದೆ ಎಂದರೆ ಸರಿಯಲ್ಲ.

7. ನಿಪಿ.9(ಎ) ರ ಕಾಲುವೆ ಏರಿಯ ಉತ್ತರ ದಿಕ್ಕಿಗೆ ನನ್ನ ಅಣ್ಣನಾದ ಕೃಷ್ಣೇಗೌಡರ ಸರ್ವೇ ನಂಬರ್ 176/2 ರ ಜಮೀನು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ನನ್ನ ಅಣ್ಣನಾದ ಕೃಷ್ಣೇಗೌಡರ ಸರ್ವೇ ನಂಬರ್ 176/2 ರ ಜಮೀನು ಇದೆ. ದಾವಾ ಆಸ್ತಿಯಲ್ಲಿ ವಾದಿಯರ ಸರ್ವೇ ನಂಬರ್ 176/5 ರ ಜಮೀನಿಗೆ ಹೋಗಲು ಬಂಡಿದಾರಿ ಇದ್ದರು ಸಹ ನನ್ನ ಅಣ್ಣನಾದ ಕೃಷ್ಣೇಗೌಡರು ಸದರಿ ಬಂಡಿದಾರಿಯನ್ನು ಒತ್ತುವರಿ ಮಾಡಿದ್ದ ಕಾರಣ ಅಸಲು ದಾವೆ ಸಂಖ್ಯೆ 160/2017 ರಲ್ಲಿ 2 ನೇ ವಾದಿಗೆ ತಮ್ಮ ಸರ್ವೇ ನಂಬರ್ 176/2 ರಲ್ಲಿ 1 ½ ಗುಂಟೆ ಜಮೀನನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

8. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿ ಮತ್ತು ವಾದಿಯರ ಸರ್ವೇ ನಂಬರ್ 176/5 ರ ಜಮೀನಿನ ಪಕ್ಕದಲ್ಲಿ ಬಂಡಿ ದಾರಿ ಹಾದು ಹೋಗುತ್ತಿದ್ದರು ಸಹ ಯಾವುದೇ ಬಂಡಿ ದಾರಿ ಇಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಸರ್ವೇ ನಂಬರ್ 176/5 ರ ಜಮೀನಿಗೆ ಹಾದು ಹೋಗುವ ಬಂಡಿ ದಾರಿಯನ್ನು ಸೇರಿಸಿಕೊಂಡು ನಾನು ನಿಪಿ.2 ರ ಸುಳ್ಳು ಕ್ರಯ ಪತ್ರವನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ರ ಕ್ರಯ ಪತ್ರದ ಉತ್ತರ ದಿಕ್ಕಿಗೆ ಬಂಡಿ ದಾರಿ ಅಥವಾ ಓಣಿ ಎಂದು ನಮೂದು ಮಾಡುವ ಬದಲು ನನ್ನ ಬಾಬ್ತು ಜಮೀನು ಎಂದು ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

9. ನಾನು ಸುಳ್ಳು ಚೆಕ್ಕುಬಂಧಿಯನ್ನು ತೋರಿಸಿ ನಿಪಿ.2 ರ ಕ್ರಯ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದು ಸದರಿ ನಿಪಿ.2 ರ ಕ್ರಯ ಪತ್ರದ ಆಧಾರದ ಮೇಲೆ ನನ್ನ ಹೆಸರಿಗೆ ದಾವಾ ಆಸ್ತಿಯ ಖಾತೆ ವರ್ಗಾವಣೆ ಮಾಡಬಾರದು ಎಂದು ಹೇಳಿ

ವಾದಿಯರು ತಹಸೀಲ್ದಾರ್ ರವರಿಗೆ ತಕರಾರು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗವವಣೆ ಮಾಡುವಂತೆ ಆದೇಶಿಸಿ ನಿಪಿ.2 ರ ಕ್ರಯ ಪತ್ರದ ತಕರಾರನ್ನು ನ್ಯಾಯಾಲಯದಲ್ಲಿ ಇತ್ಯರ್ಥಪಡಿಸುವಂತೆ ಆದೇಶಿಸಿರುತ್ತಾರೆ ಎಂದರೆ ಸರಿ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**